ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ ಬಿ4/67221/17-18

ದಿನಾಂಕ : 23 JUN 2020

**ಸುತ್ತೋಲೆ**

ವಿಷಯ: ಕೋವಿಡ್-19ಸಾಂಕ್ರಾಮಿಕ ರೋಗದ ಬಗ್ಗೆ ಅಧಿಕಾರಿ/ನೌಕರರುಗಳಲ್ಲಿ ಹೊಂದಿರಬೇಕಾದ ಜಾಗೃತಿ ಮತ್ತು ಜವಬ್ದಾರಿ ಕುರಿತು.
ಉಲ್ಲೇಖ ನಿಗಮದ ಆದೇಶ ಸಮ ಸಂಖ್ಯೇ: ದಿನಾಂಕ: 19.06.2020

--

ಪ್ರಸ್ತುತ ಕೋವಿಡ್-19, ವೈರಾಣು ಜಗತ್ತಿನಾದ್ಯಂತ ಪ್ರಸರಿಸಿದ್ದು ಮನುಕುಲವನ್ನು ಭಾಧಿಸುತ್ತಿದೆ. ಕರ್ನಾಟಕ ಸರ್ಕಾರವು ಇದರ ವಿರುದ್ಧ ಸಮರೋಪಾದಿಯಲ್ಲಿ ಹೋರಾಡುತ್ತಿದ್ದು ನಾಗರೀಕ ಸಮಾಜದಲ್ಲಿ ಈ ವೈರಾಣುವಿನ ಹರಡುವಿಕೆಯ ನಿಯಂತ್ರಣ, ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಹಲವಾರು ಮುಂಜಾಗರೂಕ ಕ್ರಮಗಳನ್ನು ಹಾಗೂ ನಿರ್ದಿಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸುತ್ತಿದೆ. ಇಂತಹ ವಿಷಮ ಸಂದರ್ಭದಲ್ಲಿ ಪ್ರತಿಯೊಬ್ಬರು ತಮ್ಮ ಜವಬ್ದಾರಿಗಳನ್ನು ಅರಿತುಕೊಳ್ಳುವುದರ ಜೊತೆಗೆ ವಾಸಿಸುತ್ತಿರುವ ಸ್ಥಳ, ಕಾರ್ಯ ನಿರ್ವಹಿಸುತ್ತಿರುವ ಕಛೇರಿ, ಪರಿಸರ ಹಾಗೂ ಸಾಮಾಜಿಕವಾಗಿ ಜಾಗೃತಿಯನ್ನು ಮೂಡಿಸುವಂತಹ ಸೇವಾ ಮನೋಭಾವವನ್ನು ರೂಢಿಸಿಕೊಳ್ಳಬೇಕಾಗಿರುತ್ತದೆ. ರಾಜ್ಯ ಸರ್ಕಾರವು ಈ ನಿಟ್ಟಿನಲ್ಲಿ ಎಲ್ಲಾ ಸರ್ಕಾರಿ ಕಛೇರಿ ನಿಗಮ/ಮಂಡಳ/ಸಾರ್ವಜನಿಕ ಉದ್ದಿಮೆ ಇತ್ಯಾದಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರ ವರ್ಗಗಳಿಂದ ಸಹಕಾರವನ್ನು ಬಯಸುತ್ತಿದ್ದು, ತತ್ಸಂಬಂಧ ಸೂಕ್ತ ನಿರ್ದೇಶನಗಳ ಮೇರೆಗೆ ಕವಿಪ್ರನಿನಿಯು ಹಲವಾರು ಕ್ರಮಗಳನ್ನು ಜರುಗಿಸಲು ನಿರ್ದಿಷ್ಟ ಆದೇಶಗಳನ್ನು ಹೊರಡಿಸುತ್ತಿದೆ. ಇಂತಹ ಆದೇಶಗಳನ್ನು ಪ್ರತಿಯೊಬ್ಬ ಅಧಿಕಾರಿ/ನೌಕರ ವೃಂದದವರು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿರುತ್ತದೆ ಹಾಗೂ ವಹಿಸಲಾದ ಜವಬ್ದಾರಿಗಳನ್ನು ಕರ್ತವ್ಯವೆಂದೇ ಭಾವಿಸಿ ಸೇವೆಯನ್ನು ಒದಗಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಕೋವಿಡ್-19 ವೈರಾಣುವಿನ ಹರಡುವಿಕೆಯ ನಿಯಂತ್ರಣ, ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ, ಹೊರಡಿಸಲಾಗುವ ಆದೇಶಗಳನ್ನು ಪಾಲಿಸುವಲ್ಲಿ ವಿಳಂಬ/ಉದಾಸೀನ/ನಿರ್ಲಕ್ಷ ಮನೋಭಾವವನ್ನು ವ್ಯಕ್ತಪಡಿಸಿದಲ್ಲಿ ಕರ್ತವ್ಯಲೋಪವೆಂದು ಪರಿಗಣಿಸಿ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು.

**ವ್ಯವಸ್ಥಾಪಕ ನಿರ್ದೇಶಕರು**
**ರವರಿಂದ ಅನುಮೋದಿಸಲ್ಪಟ್ಟಿದೆ**

23/6/2020

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)
ಕ.ವಿ.ಪ್ರ.ನಿ.ನಿ

ಪ್ರತಿಗಳು:

1) ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ
2) ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು ರವರ ಮಾಹಿತಿಗಾಗಿ
3) ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ
4) ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ/ಬೆ.ವಿ.ಕಂ. ರವರ ಹಿರಿಯ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ
5) ನಿರ್ದೇಶಕರು, (ಪ್ರಸರಣ) ಕವಿಪ್ರನಿನಿ,/ಬೆ.ವಿ.ಕಂ. ರವರ ಹಿರಿಯ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ
6) ಮುಖ್ಯ ಇಂಜಿನಿಯರ್ (ವಿ), ಬೆಂ.ಮ.ಕ್ಷೇ.ವ. ದಕ್ಷಿಣ ಮತ್ತು ಉತ್ತರ ಹಾಗೂ ಬೆಂ.ಗ್ರಾ.ಕ್ಷೇ..ವ ರವರ ಮಾಹಿತಿಗಾಗಿ
7) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನಾ ವಿಭಾಗ, ಬೆವಿಕಂ. ವಿಧಾನ ಸೌಧ, ಕೋರಮಂಗಲ, ಜಾಲಹಳ್ಳಿ, ಶಿವಾಜಿನಗರ, ಚಂದಾಪುರ, ಹೆಬ್ಬಾಳ, ಇಂದಿರಾನಗರ, ಆರ್.ಆರ್.ನಗರ, ರಾಜಾಜಿನಗರ, ಮಲ್ಲೇಶ್ವರಂ, ಜಯನಗರ, ಪೀಣ್ಯ, ಕೆಂಗೇರಿ, ಹೆಚ್.ಎಸ್.ಆರ್. ಲೇಔಟ್, ಹೊಸಕೋಟೆ ಮತ್ತು ವೈಟ್ ಫೀಲ್ಡ್ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.